# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 718 |
| ಸದಸ್ಯರ ಹೆಸರು | : | ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 14-12-2020 (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಿಂದ ವರ್ಗಾವಣೆಯಾದ ಪ್ರಶ್ನೆ) |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರ ಸಂಖ್ಯೆ ಎಷ್ಟು : | ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರ ಸಂಖ್ಯೆ 5622. |
| (ಆ) | ಗ್ರಾಮ ಪಂಚಾಯತಿ ಮೇಲ್ವಿಚಾರಕರಿಗೆ ಈಗ ನೀಡುತ್ತಿರುವ ವೇತನವೆಷ್ಟು : (ವಿವರವಾದ ಮಾಹಿತಿ ನೀಡುವುದು) : | ಗ್ರಾಮ ಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರಿಗೆ ಪ್ರಸ್ತುತ ಮಾಸಿಕವಾಗಿ ರೂ.7000/- ಗೌರವ ಸಂಭಾವನೆ ನೀಡಲಾಗುತ್ತಿದೆ. |
| (ಇ) | ಗ್ರಾಮ ಪಂಚಾಯತಿ ಮೇಲ್ವಿಚಾರಕರಿಗೆ ಕಾರ್ಮಿಕ ಇಲಾಖೆಯು ನಿಗಧಿಪಡಿಸಿದ ಕನಿಷ್ಠ ವೇತನವೆಷ್ಟು : | ಗ್ರಾಮ ಪಂಚಾಯತಿ ಮೇಲ್ವಿಚಾರಕರಿಗೆ ಕಾರ್ಮಿಕ ಇಲಾಖೆಯು ನಿಗಧಿಪಡಿಸಿದ ಕನಿಷ್ಠ ವೇತನ ರೂ.13,200/- |
| (ಈ) | ಗ್ರಂಥಾಲಯ ಇಲಾಖೆಯು ಕಾರ್ಮಿಕ ಇಲಾಖೆ ನಿಗಧಿಪಡಿಸಿದ ಕನಿಷ್ಠ ವೇತನವನ್ನು ಪಾವತಿಸದಿರಲು ಇರುವ ಕಾರಣಗಳೇನು : | ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾಕರಿಗೆ ಕನಿಷ್ಠ ವೇತನ ಪಾವತಿಸುವ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ :28-01-2019 ರಂದು ಸಭೆಯನ್ನು ಏರ್ಪಡಿಸಲಾಗಿದ್ದು, ಸದರಿ ಸಭೆಯಲ್ಲಿ ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ಮೇಲ್ವಿಚಾರಕರುಗಳಿಗೆ ಮಾಸಿಕ ರೂ. 7,000/-ರಂತೆ ಗೌರವಧನವನ್ನು ಪಾವತಿಸಲಾಗುತ್ತಿದ್ದು, ಕಾರ್ಮಿಕ ಸಚಿವಾಲಯದ ಅಧಿಸೂಚನೆ ಸಂ : ಕಾಇ 71 ಎಲ್‌ಡಬ್ಲ್ಯೂಎ 2015, ಬೆಂಗಳೂರು, ದಿನಾಂಕ :05-08-2016 ರ ಕ್ರ.ಸಂ.1 ರಲ್ಲಿ ಗ್ರಂಥಪಾಲಕ/ ಗ್ರಂಥಾಲಯ ಮೇಲ್ವಿಚಾರಕರುಗಳಿಗೆ ಮಾಸಿಕ ದರಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು ಇಲ್ಲಿ ರೂ.14,630/- ರಂತೆ ಹಾಗೂ ರಾಜ್ಯದ ಎಲ್ಲಾ ನಗರಸಭೆಗಳು (ಗ್ರೇಡ್-1) ರೂ.14,190/- ರಾಜ್ಯದ ಎಲ್ಲಾ ನಗರಸಭೆಗಳು (ಗ್ರೇಡ್-2) ಹಾಗೂ ಪುರಸಭೆಗಳು ರೂ.13,761/- ಹಾಗೂ ರಾಜ್ಯದ ಎಲ್ಲಾ ಪಟ್ಟಣ ಪಂಚಾಯತಿ ಹಾಗೂ ಗ್ರಾಮ ಪಂಚಾಯತಿಗಳಿಗೆ ರೂ.13,200/- ರಂತೆ ಪರಿಷ್ಕರಿಸಿ ಹೊರಡಿಸಲಾದ ಆದೇಶವನ್ನು ಈ ಕೆಳಕಾಣಿಸಿದ ಅಂಶಗಳ ಮೇರೆಗೆ ಅಧಿಸೂಚನೆಯನ್ನು ಹಿಂಪಡೆಯಲಾಗಿರುತ್ತದೆ.<br>1. ಸರ್ಕಾರದ ಅಧಿಸೂಚನೆ ಸಂ : ಕಾಇ 85 ಎಲ್‌ಡಬ್ಲ್ಯೂಎ 2017 ದಿ :04-09-2017 ರಲ್ಲಿ ಮೇಲೆ ಹೇಳಲಾದ ಸರ್ಕಾರದ ಅಧಿಸೂಚನೆ ಸಂ : ಕಾಇ 71 ಎಲ್‌ಡಬ್ಲ್ಯೂಎ 2015 ದಿನಾಂಕ :05-08-2016 ಅಂತಿಮ ಅಧಿಸೂಚನೆ ಪಟ್ಟಿ ಸಂ.1 ರ ಗ್ರಂಥಪಾಲಕ/ ಗ್ರಂಥಾಲಯ ಮೇಲ್ವಿಚಾರಕರು ಇವರಿಗೆ ಸಂಬಂಧಿಸಿದಂತೆ ಕನಿಷ್ಠ ವೇತನ ನಿಗದಿಪಡಿಸಿ ಅಧಿಸೂಚನೆ ಹೊರಡಿಸಲಾಗಿದ್ದು, ಸದರಿ ಅಧಿಸೂಚನೆಯನ್ನು ಹೊರಡಿಸುವಾಗ ಈ ಕೆಳಕಂಡ ಕ್ರಮಗಳನ್ನು/ಕಾರ್ಯ ವಿಧಾನವನ್ನು ಅನುಸರಿಸಿರುವುದಿಲ್ಲ ಎಂದು ಹೇಳಲಾಗಿದ್ದು, ಗ್ರಂಥಪಾಲಕ/ಗ್ರಂಥಾಲಯ ಮೇಲ್ವಿಚಾರಕ ಹುದ್ದೆಯು ಬೇರೆ ಬೇರೆಯಾಗಿರುತ್ತದೆ. ಪ್ರಸ್ತಾವನೆಯನ್ನು ಅಧಿಸೂಚಿಸುವ |

| | | |
|---|---|---|
| | | ಪೂರ್ವದಲ್ಲಿ 1948 ರ ಕನಿಷ್ಠ ವೇತನ ಕಾಯ್ದೆಯ ಕಲಂ 5(1) (ಬಿ) ರನ್ವಯ ಬಾಧಿತರಾಗುವವರ ಮಾಹಿತಿಗಾಗಿ ಪ್ರಕಟಿಸುವುದು ಕಡ್ಡಾಯವಾಗಿರುತ್ತದೆ. ಗ್ರಂಥಾಲಯ ಮೇಲ್ವಿಚಾರಕರಿಗೆ ಸಂಬಂಧಿಸಿದಂತೆ ಇಂತಹ ಯಾವುದೇ ಪ್ರಸ್ತಾವನೆಯನ್ನು ಅಧಿಸೂಚಿಸಲಾಗಿಲ್ಲ. ಅಂದರೆ ನಿಗದಿತ ಕಾರ್ಯ ವಿಧಾನವನ್ನು ಅನುಸರಿಸಿರುವುದಿಲ್ಲ.<br>2. ಸದರಿ ಅಧಿಸೂಚನೆಯನ್ನು ಹೊರಡಿಸುವ ಪೂರ್ವದಲ್ಲಿ ಕಾರ್ಮಿಕ ಇಲಾಖೆಯು ಆಡಳಿತ ಇಲಾಖೆಯಾದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯನ್ನು ಸಂಪರ್ಕಿಸಿ ಅವರ ಅಭಿಪ್ರಾಯ ಪಡೆದಿರುವುದಿಲ್ಲ.<br>3. ಗ್ರಂಥಾಲಯ ಮೇಲ್ವಿಚಾರಕರು ಗೌರವ ಸಂಭಾವನೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.<br>4. ಮೇಲ್ವಿಚಾರಕರುಗಳು ಕರ್ತವ್ಯ ನಿರ್ವಹಿಸುತ್ತಿರುವ ಅವಧಿ ಮತ್ತು ನಿರ್ವಹಣೆಯ ಜವಾಬ್ದಾರಿಗನುಗುಣವಾಗಿ ನೀಡಲಾಗುವ ಒಂದು ಗೌರವ ಸಂಭಾವನೆಯಾಗಿದ್ದು, ಪೂರ್ಣ ಕಾಲಿಕ ನೌಕರರ ವ್ಯಾಪ್ತಿಗೆ ಬರುವುದಿಲ್ಲ ಹಾಗೂ ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ಉದ್ಯಮಿ ಅಥವಾ ಕಾರ್ಖಾನೆಗಳ ವ್ಯಾಪ್ತಿಗೆ ಬರುವುದಿಲ್ಲ. ಅಲ್ಲದೆ ಇವರುಗಳನ್ನು ಕಾರ್ಮಿಕರೆಂದು ಪರಿಗಣಿಸುವುದು ಸೂಕ್ತವಾಗಿರುವುದಿಲ್ಲವೆಂಬ ಅಂಶವನ್ನು ಕಾರ್ಮಿಕ ಇಲಾಖೆಯ ಪತ್ರ ಸಂಖ್ಯೆ : ಕಾಇ 212 ಎಲ್‌ಡಬ್ಲ್ಯೂಎ 2013, ದಿನಾಂಕ :18-12-2013 ರಲ್ಲಿ ಸ್ಪಷ್ಟಪಡಿಸಲಾಗಿರುತ್ತದೆ.<br>5. ಮೇಲ್ವಿಚಾರಕರುಗಳ ಕಾರ್ಯ ನಿರ್ವಹಣಾ ಅವಧಿಯು ಕೇವಲ 4 ಗಂಟೆಯಾಗಿರುವುದರಿಂದ ಕನಿಷ್ಠ ವೇತನದಡಿ ಬರುವುದಿಲ್ಲ.<br>6. ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕ ಹುದ್ದೆಗಳು ಮಂಜೂರಾದ ಹುದ್ದೆಗಳಾಗಿರುವುದಿಲ್ಲ ಹಾಗೂ ಮಂಜೂರಾದ ಹುದ್ದೆಗಳ ಎದುರಿಗೆ ಕಾರ್ಯನಿರ್ವಹಿಸುತ್ತಿಲ್ಲ. |
| (ಉ) | ಗ್ರಂಥಾಲಯ ಮೇಲ್ವಿಚಾರಕರಿಗೆ ಕನಿಷ್ಠ ವೇತನ ಪಾವತಿಸಲು ಸರ್ಕಾರ ಯಾವ ಕಾಲಮಿತಿಯೊಳಗೆ ಕ್ರಮ ವಹಿಸಲಾಗುವುದು ? | ಆರ್ಥಿಕ ಇಲಾಖೆಯ ದಿನಾಂಕ:02-01-2020, 16-03-2020 ಮತ್ತು 12-08-2020 ಮತ್ತು ದಿನಾಂಕ:05-12-2020 ರ ಟಿಪ್ಪಣಿಗಳಲ್ಲಿ ಪ್ರಸ್ತುತ ನೀಡಲಾಗುತ್ತಿರುವ ಗೌರವ ಸಂಭಾವನೆಯನ್ನು ಕಾರ್ಮಿಕ ಇಲಾಖೆಯ ಕನಿಷ್ಠ ವೇತನಕ್ಕೆ ಹೋಲಿಸಲು ಸಾಧ್ಯವಿಲ್ಲ, ಇದು ಗೌರವ ಸಂಭಾವನೆ ಹಾಗೂ ಕನಿಷ್ಠ ವೇತನವು ಸಂಪೂರ್ಣ ದಿನದ (8 ಗಂಟೆಗಳ ಕಾಲ) ಕಾರ್ಯಕ್ಕೆ ಇರುತ್ತದೆ. ಗ್ರಂಥಾಲಯ ಮೇಲ್ವಿಚಾರಕರು ಗೌರವ ಸಂಭಾವನೆ ಮೇರೆಗೆ 4 ಗಂಟೆಗಳ ಕಾಲ ಕೆಲಸ ಮಾಡುತ್ತಿರುವುದರಿಂದ ಇದನ್ನು ಕಾರ್ಮಿಕ ನೀತಿಯಲ್ಲಿ ತರಲು ಸಾಧ್ಯವಿಲ್ಲವಿರುವುದಿಲ್ಲವೆಂದು ತಿಳಿಸಿರುತ್ತದೆ. |

ಸಂಖ್ಯೆ: ಗ್ರಾಅಪ 909 ಗ್ರಾಪಂಅ 2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು